<u>ಅಸಲು ದಾವಾ</u>ಃ- 284/2013 ಡಿ.ಡಬ್ಲ್ಯೂಃ- 3

ದಿನಾಂಕಃ 11.11.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ 1(ಎ) ಯಿಂದ (ಡಿ) ಪರ ಶ್ರೀ.ಯು ಕೆ ವಕೀಲರಿಂದ</u>

ನಿಡಿ 1 ರಿಂದ 7 ರ ಪಹಣಿಯ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿಯು ಸರ್ವೆ ನಂ.112/1 ರಲ್ಲಿ 13 ಗುಂಟೆ ನನ್ನ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಸದರಿ 13 ಗುಂಟೆಯನ್ನು ನಾನು ಒಟ್ಟು ಕುಟುಂಬದ ಆಸ್ತಿಯನ್ನು ಖರೀದಿ ಮಾಡಿದ್ದರಿಂದ ಸದರಿ 13 ಗುಂಟೆಯು ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನಿಡಿ 16 ರಿಂದ 19 ರ ದಾಖಲೆಗಳನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಜುಬಾನೆ ಹಿಸ್ಸೆಯ ಮೂಲಕ ಖಾತೆ ಮಾಡುವಂತೆ ತಹಶೀಲ್ದಾರ್ ರವರಿಗೆ ಅರ್ಜಿ ನೀಡಿದ್ದು, ಪ್ರತಿವಾದಿ 1 ಬಿ ರವರು ಸದರಿ ಅರ್ಜಿಯನ್ನು ಕಚೇರಿಯಲ್ಲಿ ನಾಪತ್ತೆ ಮಾಡಿದ್ದು ಸದರಿ ಅರ್ಜಿಗೆ ಸಂಬಂಧಿಸಿದ ದಾಖಲೆಗಳು ಎಂದು ನುಡಿಯುತ್ತಾರೆ. ತಹಶೀಲ್ದಾರ್ ರವರಿಗೆ ನೀಡಿದ್ದೆ ಎನ್ನಲಾದ ಅರ್ಜಿಯ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ತಹಶೀಲ್ದಾರ್ ಕಚೇರಿಯಲ್ಲಿ ಅರ್ಜಿಗಳು ನಾಪತ್ತೆಯಾದ ನಂತರ ಪುನಃ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಅದರ ಸಂಬಂಧ ವಾದಿಯು ದಾವಾ ಸ್ವತ್ತಿನ ಸಂಬಂಧ ಈ ದಾವೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ಹೊರತುಪಡಿಸಿ ಜುಬಾನೆ ಹಿಸ್ಸೆ ಪ್ರಕಾರ ಹಿಸ್ಸೆ ಮಾಡಿಕೊಡಿ ಎಂದು ಬೇರೆ ಆಸ್ತಿಗಳಿಗೆ ಸಂಬಂಧಿಸಿದಂತೆ ಅರ್ಜಿ ನೀಡಿದ್ದೀರಾ ಎಂದರೆ ಇಲ್ಲ. ನಿಡಿ 16 ರಿಂದ 19 ರ ದಾಖಲೆಗಳು ಈ ದಾವೆಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಹಿಂದೆ ಸರ್ಕಾರಿ ನೌಕರನಾಗಿದ್ದರಿಂದ ನನ್ನ ಪ್ರಭಾವ ಬೀರಿ ನಿಡಿ 23 ರ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 25 ರ ಮತದಾರರ ಪಟ್ಟಿಯನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಕ್ಷಗಾರರ ವಿಳಾಸವನ್ನು ತೋರಿಸುವುದಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 25 ರ ದಾಖಲೆಯು ಈ ದಾವೆಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಿಪಿ 2 ವಿಭಾಗ ಪತ್ರದಲ್ಲಿ

ಪ್ರತಿವಾದಿ 1 (ಎ) ರವರ ಸಹಿ ಇಲ್ಲ ಎಂದರೆ ಸರಿ. ನಿಪಿ 2 ನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 2 ವಿಭಾಗ ಪತ್ರದ ಪ್ರಕಾರ ಜಮೀನುಗಳ ಖಾತೆ ಬದಲಾವಣೆ ಆಗಿಲ್ಲ ಎಂದರೆ ಸರಿ. ಒಂದು ವೇಳೆ ನಿಜವಾಗಿಯೂ ನೋಂದಾಯಿತ ವಿಭಾಗ ಪತ್ರವಾಗಿದ್ದರೆ ಜಮೀನುಗಳ ಖಾತೆ ಬದಲಾವಣೆ ಆಗುತ್ತಿತ್ತು ಎಂದರೆ ಗೊತ್ತಿಲ್ಲ.

ನಿಪಿ 2 ನೋಂದಾಯಿತ ವಿಭಾಗ ಪತ್ರ ಅಲ್ಲ ಎಂದರೆ ಸರಿ. ಪ್ರತಿವಾದಿ 1 ಎ ಯಿಂದ ಬಿ ರವರಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ವಾದಿಯ ಕಡೆಯಿಂದ ಸುಳ್ಳು ದಾವೆ ಹಾಕಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಅನುಕೂಲ ಮಾಡುವ ಉದ್ದೇಶದಿಂದ ನಾನು ಸದರಿ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಪ್ರತಿವಾದಿ 1 ಎ ಯಿಂದ ಬಿ ರವರಿಗೆ ಹಿಸ್ಸೆಯನ್ನು ತಪ್ಪಿಸುವ ಉದ್ದೇಶದಿಂದ ವಾದಿಯಿಂದ ಸುಳ್ಳು ದಾವೆ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಎ ರವರಿಗೆ ಹಿರೇಕಲ್ಮಠದಲ್ಲಿ ನಿಡಿ 12 ರಂತೆ ಮನೆ ಇದೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ಬೇರೆಯಾದ ನಂತರ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ 12 ರ ಮನೆ ಪ್ರತಿವಾದಿ 1 ಎ ರವರ ಸ್ವಂತ ಆಸ್ತಿ ಎಂದರೆ ಸರಿ. ನಾನು ಹಾಕಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಮತ್ತು ದಾಖಲೆಗಳು ವಾದಿಗೆ ಅನುಕೂಲವಾಗಲೀ ಎಂದು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- ಪ್ರತಿವಾದಿ 4 ರಿಂದ 13 ರ ಪರ ವಕೀಲರಿಂದ

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ